ಸಾಕ್ಷಿಯನ್ನು ದಿನಾಂಕ **19-11-2022** ರಂದು ಸತ್ಯಪ್ರಮಾಣ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು **3** ನೇ ಪಕ್ಷಗಾರರ ಪರ ಶ್ರೀ ಬಿ ವಿ ಎಂ ವಕೀಲರಿಂದ:

ಪಟ್ಲೂರಿ ಮೋಹನ್ ರಾವ್ 3 ನೇ ಪಕ್ಷಗಾರ ನಂ:1 ರವರ ಗಂಡ ಸರ್ವೇ ನಂ: 54/ಡ ಪಿ2 ರಲ್ಲಿ ಒಂದು ಎಕರೆ ಜಮೀನು ಹೊಂದಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ಅವರ ತಂಗಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮೋಹನ್ ರಾವ್ ಇವರು ಈ 1 ಎಕರೆ ಜಮೀನನ್ನು ಅವರ ತಂಗಿಗೆ ಕೊಟ್ಟಿಲ್ಲ ಮತ್ತು ದಾನ ಪತ್ರದ ಮುಖಾಂತರ ಅವರ ಖಾಸಾ ಮಗಳಾದ 3 ನೇ ಪಕ್ಷಗಾರ ನಂ:2 ರವರಿಗೆ ಕೊಟ್ಟಿದ್ದಾರೆ ಎನ್ನುವ ವಿಚಾರ ಗೊತ್ತಿಲ್ಲ. ಈ ದಾವಾ ಸ್ವತ್ತಿನ ಮೇಲೆ 3 ನೇ ಪಕ್ಷಗಾರರು ಮತ್ತು ಜೆಡಿಆರ್ ನಂ:1 ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಜಮೀನಿನ ಖರೀದಿ ಕರಾರುಪತ್ರ ಕಾನೂನು ಬಾಹೀರವಾಗಿದೆ ಎಂದರೆ ಸರಿಯಲ್ಲ. 3 ನೇ ಪಕ್ಷಗಾರರಿಗೆ ಯಾವುದೇ ಹಕ್ಕು ಸಿಗಬಾರದು ಅಂತ ನನ್ನ ತಂದೆ ಮತ್ತು ಜೆಡಿಆರ್ ನಂ:1 ಮತ್ತು 2 ಶಾಮೀಲಾಗಿ ಖರೀದಿ ಕರಾರುಪತ್ರ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. 3 ನೇ ಪಕ್ಷಗಾರರಿಗೆ ಈ ದಾವಾ ಸ್ವತ್ತಿನ ಸಂಬಂಧವಾಗಿ ಆಗಿರುವ ಖರೀದಿ ಕರಾರುಪತ್ರ ಮತ್ತು ಡಿಕ್ರಿ ವಿಚಾರ ಈ ಅರ್ಜಿ ಸಲ್ಲಿಸುವ ವೇಳೆಯಲ್ಲಿ ಗೊತ್ತಾಗಿದೆ ಎಂದರೆ ಸಾಕ್ಷಿ ಅವರಿಗೆ ಮೊದಲೇ ಗೊತ್ತಾಗಿದೆ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ಸತ್ಯ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.